## ಕಥೆ

ತಿಂಗಳು ಅವಳ ಮದುವೆ ನಿಶ್ಚಯವಾಗಿದೆ. ಅದಕ್ಕೆ ಹೋಗಲು ಪ್ರಯತ್ನಿಸುತ್ತಿದ್ದೇನೆ. ಮಗಳ ಮದುವೆ ಮುಗಿದ ಮೇಲೆ ಊರಿಗೆ ಹೋಗಿ ಕುಟುಂಬದೊಂದಿಗೆ ನೆಮ್ಮದಿಯಾಗಿ ಇರಬೇಕೆಂದುಕೊಂಡಿದ್ದೆ. ಆದರೆ ನನ್ನ ಹೆಂಡತಿ ಯಾವನೊಂದಿಗೋ ಸೇರಿಕೊಂಡು ನನ್ನ ಕನಸುಗಳಿಗೆ ಕೊಳ್ಳಿ ಇಟ್ಟಳು' ಎಂದ. 'ನೀವು ಇದನ್ನೆಲ್ಲಾ ಸೇರಿಸಿ ಒಳ್ಳೆಯ ಕಥೆ ಬರೆಯಿರಿ ಸರ್. ನೀವು ಬರೆದ ಕಥೆಯನ್ನು ಅವಳಿಗೆ ಕಳುಹಿಸುತ್ತೇನೆ. ಅದನ್ನು ಓದಿ ಅವಳ ಮನಃಪರಿವರ್ತನೆಯಾಗಬೇಕು, ಹಾಗೆ ಬರೆಯಿರಿ ಸರ್. ಈಗಲೂ ನೆಟ್ಟಗೆ ನನ್ನೊಂದಿಗೆ ಸಂಸಾರ ಮಾಡಿಕೊಂಡು ಇರುವುದಾದರೆ ಅವಳನ್ನು ಕ್ಷಮಿಸಿ, ಜೊತೆಯಲ್ಲಿ ಬದುಕಲು ನಾನು ಸಿದ್ಧವಿದ್ದೇನೆ ಸರ್' ಎಂದನು ನಾರಾಯಣ.

ಈತ ಎಂತಹ ದುರದೃಷ್ಟವಂತ. ಎಷ್ಟೊಂದು ಕಷ್ಟದ ಜೀವನ ಸಾಗಿಸುತ್ತಿದ್ದಾನೆ. ಇಂತಹ ಅಮಾಯಕನಿಗೆ ಮೋಸ ಮಾಡಲು ಅವಳಿಗೆ ಮನಸ್ಸಾದರೂ ಹೇಗೆ ಬಂತು ಎನಿಸಿ ಕುಮಾರನಿಗೆ ಮನಸ್ಸು ಭಾರವಾಯಿತು. 'ಆಯಿತು ಖಂಡಿತಾ ಕಥೆ ಬರೆಯುತ್ತೇನೆ, ನನ್ನ ಕಥೆಯಿಂದ ನಿನ್ನ ಕುಟುಂಬಕ್ಕೆ ಒಳ್ಳೆಯದಾಗುವುದಾದರೆ ಅದಕ್ಕಿಂತ ಹೆಚ್ಚಿನ ತೃಪ್ತಿ ಕಥೆಗಾರನಿಗೇನಿದೆ? ಬೇಜಾರಾಗಬೇಡ, ಎಲ್ಲವೂ ಒಳ್ಳೆಯದಾಗುತ್ತದೆ' ಎಂದು ಆಶ್ವಾಸನೆಕೊಟ್ಟ ಕುಮಾರ್. ತನ್ನ ಪರಿಸ್ಥಿತಿಯನ್ನು ನೆನೆಸಿಕೊಂಡು ಭಾವೋದ್ವೇಗಕ್ಕೊಳಗಾಗಿದ್ದ ನಾರಾಯಣನ ದುಃಖ ಕಣ್ಣೀರಾಗಿ ಹರಿಯುತ್ತಿತ್ತು. ಅವನ ಕಥೆಯನ್ನು ಕೇಳಿ ಮನೆಗೆ ಬಂದ ಕುಮಾರನಿಗೆ ಇವರಿಬ್ಬರನ್ನು ಒಟ್ಟಾಗಿಸುವ ಬಗೆ ಹೇಗೆ ಎಂದು ಯೋಚಿಸಿದ. ಹೇಗೂ ನಾರಾಯಣನ ಹೆಂಡತಿ ತನ್ನ ಕಥೆಗಳ ಅಭಿಮಾನಿ ಎಂದು ಗೊತ್ತಾಗಿತ್ತು. ಹಾಗಾಗಿ ನಾರಾಯಣನ ಕಷ್ಟದ ಜೀವನ ಮತ್ತು ಕುಟುಂಬಕ್ಕಾಗಿ ಆತ ಮಾಡಿರುವ ತ್ಯಾಗದ ಬಗ್ಗೆ ಒಂದು ಕಥೆ ಬರೆಯಬೇಕು. ಅದನ್ನು ಓದಿ ಆತನ ಹೆಂಡತಿಗೆ ತನ್ನ ತಪ್ಪಿನ ಅರಿವಾಗಬೇಕು ಮಾತ್ರವಲ್ಲದೇ ಅವಳ ಮನಃಪರಿವರ್ತನೆಯಾಗಿ ಈ ಕುಟುಂಬ ಒಂದಾಗಬೇಕು. ಇಲ್ಲಿ ಕಥೆ ಗೆದ್ದರೆ ನಾರಾಯಣನು ಗೆದ್ದಂತೆ, ಅವನು ಗೆದ್ದರೆ ಆತನ ಕುಟುಂಬ ಉಳಿಯುತ್ತದೆ ಎನಿಸಿತು. ಕಥೆಗೆ ಒಳ್ಳೆಯ ವಸ್ತು ಸಿಕ್ಕಿತ್ತು. ಆದರೆ ಆತನ ಹೆಂಡತಿಯನ್ನೂ ಒಮ್ಮೆ ಮಾತನಾಡಿಸಿ, ಅವಳ ಅಭಿಪ್ರಾಯವನ್ನೂ ಕೇಳಿ ಬರೆದರೆ ಕಥೆಗೆ ಪೂರ್ತಿ ನ್ಯಾಯ ಒದಗಿಸಿದಂತಾಗುತ್ತದೆ ಎಂದುಕೊಂಡ ಕುಮಾರ್. ಏಕೆಂದರೆ ತನ್ನ ಕಳೆದ ಕಥಾ ಸಂಕಲನದ ಕಥೆಯೊಂದನ್ನು ವಿಮರ್ಶಕರೊಬ್ಬರು ಕಟು ವಿಮರ್ಶೆಯಿಂದ ಚಚ್ಚಿ ಹಾಕಿದ್ದರು. ಕಥೆಗಾರರು ಒಂದು ಪಾತ್ರದ ಪರವಾಗಿ ನಿಲುವು ತೆಗೆದುಕೊಂಡು ಏಕಪಕ್ಷೀಯವಾಗಿ ಕಥೆ ಬರೆದಿದ್ದಾರೆ ಎಂಬ ಆರೋಪ ಹೊರಿಸಿದ್ದರು. ಅದನ್ನು ನೆನೆಸಿಕೊಂಡ ಜಿಗಣಿ ಕುಮಾರ್ ನಾರಾಯಣನ ಹೆಂಡತಿಯನ್ನು ಒಮ್ಮೆ ಮಾತನಾಡಿಸಿ, ಈತ ಹೇಳಿದ ವಿಷಯಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ನಂತರ ಕಥೆ ಬರೆಯೋಣ ಎಂಬ ಯೋಚನೆಗೆ ಬಿದ್ದ. ಅವಳೊಂದಿಗೆ ಮಾತನಾಡಲೋ ಬೇಡವೋ ಎಂಬ ದ್ವಂದ್ವದಲ್ಲಿ, ಕಥೆಯನ್ನು ಪೂರ್ತಿ ಮುಗಿಸಲಾಗಲಿಲ್ಲ. ಅಷ್ಟರಲ್ಲಾಗಲೇ ನಾರಾಯಣನು ಜಿಗಣಿ ಕುಮಾರನಿಗೆ ಎಲ್ಲೆಲ್ಲೋ ಎದುರಾಗಿ ಕಥೆಯ ಬಗ್ಗೆ ವಿಚಾರಿಸತೊಡಗಿದ್ದ. ಮೊದಮೊದಲು 'ನನ್ನ ಬಗ್ಗೆ ಕಥೆ ಯಾಕೆ ಸರ್? ಎಂದು ಹೇಳುತ್ತಿದ್ದವನು ಈಗ 'ನನ್ನ ಕಥೆಯ ವಿಷಯ ಎಲ್ಲಿಗೆ ಬಂತು? ಇನ್ನೂ ಮುಗಿದಿಲ್ಲವೇ?' ಎಂದು ಪದೇಪದೇ ವಿಚಾರಿಸತೊಡಗಿದ್ದ. ಒಂದು ರಾತ್ರಿ ಊಟ ಮುಗಿಸಿ ಮಾಮೂಲಿನಂತೆ ಕಸ ಎಸೆಯಲು ಹೋಗಿದ್ದ ಕುಮಾರನಿಗೆ ನಾರಾಯಣ ಎದುರಾಗಿದ್ದ. 'ನನ್ನ ಕಥೆಯ ವಿಷಯ ಏನಾಯ್ತು? ಇನ್ನೂ ಮುಗಿದಿಲ್ಲವೇ?' ಎಂದು ಪ್ರಶ್ನಿಸಿದ ನಾರಾಯಣನ ಕಣ್ಣು ಕೆಂಪಾಗಿದ್ದವು, ಮುಖದಲ್ಲಿ ಕೋಪವಿತ್ತು. ಬಾಯಿಂದ ಕುಡಿದ ವಾಸನೆ ಬರುತ್ತಿತ್ತು. 'ಬರೆಯುತ್ತಿದ್ದೇನೆ ಕಣಯ್ಯಾ. ಸ್ವಲ್ಪ ಬಾಕಿ ಇದೆ' ಎಂದು ಕುಮಾರನು ಹೇಳುತ್ತಿರುವಾಗಲೇ 'ಕಥೆ ಬರೆಯುತ್ತೇನೆಂದು ಸುಮ್ಮಸುಮ್ಮನೆ ನನಗೆ ಆಶ್ವಾಸನೆಕೊಟ್ಟಿರಿ. ಏಕೆ ಮುಗಿಸುತ್ತಿಲ್ಲ? ಯಾವಾಗ ನನಗೆ ನ್ಯಾಯ ಸಿಗುತ್ತೇ' ಎಂದು ಹೇಳುತ್ತ, ತೂರಾಡುತ್ತಾ ನಾರಾಯಣನು ಮುಂದೆ ಬಂದು ಅಚಾನಕ್ಕಾಗಿ ಕುಮಾರನ ಕೊರಳ ಪಟ್ಟಿ ಹಿಡಿದುಕೊಂಡ. ಇಲ್ಲಿಯವರೆಗೂ ಹಲವಾರು ಕಥೆಗಳನ್ನು ಬರೆದು ಪ್ರಶಸ್ತಿ ಗಳಿಸಿದ್ದ ಕುಮಾರನಿಗೆ, ಮೊದಲ ಬಾರಿಗೆ ತನ್ನ ಕಥೆಯ ನಾಯಕನೊಬ್ಬ ತನ್ನ ಕೊರಳ ಪಟ್ಟಿಗೇ ಕೈ ಹಾಕಿದ್ದ. ಹಿಂದೆಂದೂ ಈ ರೀತಿಯ ಸಂದರ್ಭ ಎದುರಾಗಿರಲಿಲ್ಲ. ಕುಮಾರನು ಒಂದು ಕ್ಷಣ ಬೆವತು ಹೋದ. ನಾರಾಯಣನು ಹೆಂಡತಿಯ ಮೇಲಿನ